ಪ್ರಜಾವಾಣಿ

## ಜೈನ್ ವಿವಿ ಕ್ರೀಡೋತ್ಸವ ನಾಳೆಯಿಂದ

ಬೆಂಗಳೂರು: ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದ ವತಿಯಿಂದ ಫೆಬ್ರುವರಿ 14ರಿಂದ 17ರ ವರೆಗೆ ಅಖಿಲ ಭಾರತ ಹದಿನಾಲ್ಕನೇ ವಾರ್ಷಿಕ ಕ್ರೀಡೋತ್ಸವ ನಡೆಯಲಿದೆ.

ಚೆನ್ನೈಯ ಲೊಯೊಲಾ ಕಾಲೇಜು, ಮದ್ರಾಸ್ ಕ್ರಿಶ್ಚಿಯನ್ ಕಾಲೇಜು, ಎಸ್ ಆರ್‌ಎಂ ವಿಶ್ವವಿದ್ಯಾಲಯ, ಹಿಂದೂಸ್ತಾನ್ ಯೂನಿವರ್ಸಿಟಿ, ತಿರುಚ್ಚಿಯ ಅಣ್ಣಾ ತಾಂತ್ರಿಕ ವಿಶ್ವವಿದ್ಯಾಲಯ, ಚಿದಂಬರಮ್‌ನ ಅಣ್ಣಾಮಲೈ ವಿಶ್ವವಿದ್ಯಾಲಯ, ಶ್ರೀಲಂಕಾದ ಕ್ರೈಸ್ಟ್ ಕಿಂಗ್ ಕ್ಲಬ್ ಸೇರಿದಂತೆ 25ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳ ಆಯ್ದ ಒಂದು ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಈ ಕ್ರೀಡೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.

ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಕ್ರಿಕೆಟ್, ಹಾಕಿ, ಈಜು, ಟೇಬಲ್‌ಟೆನಿಸ್, ಟೆನಿಸ್, ವಾಲಿಬಾಲ್ ವಿಭಾಗಗಳಲ್ಲಿ ಪೈಪೋಟಿ ನಡೆಯಲಿವೆ.